ಕರೆದಿದ್ದಾನೆ. ರಮಣಿ, ಪ್ರಾಣೇಶ್ವರಿ, ಗಡಸುಗಾರ್ತಿ, ಎನ್ನರಸಿ, ಕಾಂತೆ, ಸುಂದರಿ, ದೇವಿ, ರತಿದೇವಿ.... ಮುಂತಾದ ಹೆಸರುಗಳಿಂದ ಕರೆಯುತ್ತ, ಕಥೆ ಹೇಳಿದ್ದಾನೆ. ಕೇವಲ ಕನ್ನಡ ಭಾಷೆಯಲ್ಲಿ ಅಲ್ಲ, ಜಗತ್ತಿನ ಯಾವ ಭಾಷೆಯ ಕವಿಯು ಮುದ್ದಣನಷ್ಟು ಹೆಂಡತಿಯನ್ನು ಗುಣವಾಚಕಗಳನ್ನು ಬಳಸಿ ಕರೆದದ್ದು ಇಲ್ಲ. ಪರಸ್ಪರ ಹೊಗಳುವ, ತೆಗಳುವ, ಕಿಚಾಯಿಸುವ ವಿಶೇಷಣಗಳ ಪರಿ ಅನುಪಮವಾದದ್ದು. ಪತ್ನಿ, ಮನೋರಮೆ ಕೂಡ ಮುದ್ದಣನ ಕುರಿತು ಬಳಸಿದ ವಿಶೇಷಣಗಳಿಗೂ ಕೊರತೆ ಇಲ್ಲ. ದಂಪತಿಗಳ ಸಾಂಗತ್ಯದ ಪರಿ ಹಾಗಿರಬೇಕು ಎಂದೆನಿಸದಿರದು.

**ಹೆಂಡತಿ ಒಬ್ಬಳು ಮನೆಯೊಳಗಿದ್ದರೆ**
**ನನಗದೆ ಕೋಟಿ ರೂಪಾಯಿ...**
**ಹೆಂಡತಿ ತವರಿಗೆ ಹೋಗುವೆನೆಂದರೆ**
**ಎಲ್ಲಿಲ್ಲದ ಕೋಪ...**

ಎಂದು ಕವಿ ಕೆ.ಎಸ್. ನರಸಿಂಹ ಸ್ವಾಮಿ ಅವರ ಗೀತೆಯನ್ನು ನೀವು ಕೇಳಿರಬೇಕು. ಅದು ದಾಂಪತ್ಯದ ಆರಂಭದ ಕಾಲದಲ್ಲಿ ಅವರು ರಚಿಸಿದ ಗೀತೆ ಆಗಿರಬಹುದು. ದಾಂಪತ್ಯದ ಒಂದು ಹಂತದಲ್ಲಿ ತಮಗೂ ಅದು ರುಚಿಸಿರಬಹುದು. ನಮ್ಮ ಸ್ನೇಹಿತರಲ್ಲಿ ಕೆಲವರು ಹೆಂಡತಿ ತವರಿಗೆ ಹೋಗುವುದನ್ನೇ ಕಾಯ್ದು, ಅವರು ಹೋದಾಗ ಹಿಗ್ಗಿ ಹೀರೇಕಾಯಿ ಆಗುವುದನ್ನು ನೋಡಿದ್ದೇನೆ. ಅತ್ತ ಹೆಂಡತಿಯನ್ನು ತವರಿನ ರೈಲು ಹತ್ತಿಸಿ, ಇತ್ತ ಸ್ನೇಹಿತರನ್ನು ಮನೆಯಲ್ಲಿ ಸೇರಿಸಿ ಗುಂಡು ತುಂಡಿನೊಂದಿಗೆ ಸೆಲೆಬ್ರೇಟ್ ಮಾಡುವುದನ್ನು ನೋಡಿದ್ದೇನೆ. ಅಂಥ ಸಮಾರಂಭದಲ್ಲಿ ಭಾಗವಹಿಸಿ ಮೈಚಳಿ ಬಿಟ್ಟು ನಲಿದವರೊಡನೆ ನಾನೂ ಒಂದಾಗಿದ್ದೇನೆ. ಗಂಡನೊಂದಿಗೆ ಜಗಳವಾಡಿ ತವರಿಗೆ ಹೋದ ಹೆಂಡತಿ, ಅಲ್ಲಿ, ತಂದೆ, ತಾಯಿ ಅಣ್ಣ ತಮ್ಮ, ತಂಗಿಯರೊಂದಿಗೆ ಜಗಳವಾಡಿ ನಾಲ್ಕು ದಿನದಲ್ಲಿ ಮರಳಿ ಬಂದು, ಅವರ ಯಾರ ಕೂಡ ಜಗಳ ನಿನ್ನೊಂದಿಗಿನ ಜಗಳದಂತೆ ಮಜಾ ಬರುವದಿಲ್ಲ ಎಂದು ಗಂಡನೊಂದಿಗೆ ಜಗಳಕ್ಕೆ ನಿಂತ ಸತಿಯರೂ ಇದ್ದಾರೆ. ಇದೊಂದು ರೀತಿ ತೀಡುವ ಗಂಧ.

ದಾಂಪತ್ಯದ ಆರಂಭದ ಹಂತದಿಂದ ಅಂತ್ಯದವರೆಗೆ ಗಂಡ ಹೆಂಡತಿ ಮಧ್ಯದ ಜಗಳ ಕೂಡ ವಿವಿಧ ರೂಪ ಸ್ವರೂಪಗಳನ್ನು ಪಡೆಯುತ್ತಾ ಅನೇಕ ಏರಿಳಿತಗಳೊಂದಿಗೆ ಮುಂದುವರೆಯುತ್ತದೆ. ಮೊದಮೊದಲು ಒಂದಿಷ್ಟು ಗಂಡನ ಕೈ ಮೇಲಾದಂತೆ ಅನಿಸಿದರೂ ಆಮೇಲಾಮೇಲೆ ಹೆಂಡತಿ ಕೈಮೇಲಾಗುವುದೇ ಹೆಚ್ಚು. ಸಂಸಾರದಲ್ಲಿ ಸಾಮರಸ್ಯ ಮೂಡಲು ಕಾಲಾವಕಾಶ ಬೇಕಾಗುತ್ತದೆ. ಗಂಡ ಒಂದು ಹಂತದಲ್ಲಿ ತತ್ವಜ್ಞಾನಿ ಆಗಿ ಮೌನಿ ಆಗಿಬಿಡಬಹುದು. ಆದರೆ, ಹೆಂಡತಿ ಕೊನೆಯವರೆಗೆ ಮೊದಲಿನ ಹೆಂಡತಿಯಾಗಿಯೇ ಉಳಿಯುತ್ತಾಳೆ. ಅದು ಅವಳ ಶಕ್ತಿ. ಅವಳ ಶಕ್ತಿ ಅತೀ ಹೆಚ್ಚಾಯಿತೆಂದು ಪತ್ನಿ ಪೀಡಕರ



ಸಂಘ ಸೇರುವ ಗಂಡಂದಿರೂ ಇರುತ್ತಾರೆ. ಆದರೆ, ಗಂಡಂದಿರ ಪೀಡೆಯನ್ನು ಸಹನೆಯಿಂದ ನಿಭಾಯಿಸುವ ಮಡದಿಯರೇ ಹೆಚ್ಚು. ಸಹನೆಯೂ ಅವಳ ಶಕ್ತಿ. ಎಂದೂ ಜಗಳವಾಡದ ಅನ್ಯೋನ್ಯವೆನ್ನಲಾಗುವ ಕೆಲವು ದಾಂಪತ್ಯದ ಉದಾಹರಣೆಗಳನ್ನು ಅಲ್ಲಲ್ಲಿ ನೋಡುತ್ತೇವೆ, ಕೇಳುತ್ತೇವೆ. ಆದರೆ, ಅಂತಹ ಒಂದು ಅನ್ಯೋನ್ಯತೆ ಜಗಳ ಜಾಪತ್ರೆ ಎಲ್ಲಾ ಮುಗಿದು ಸುಸ್ತಾದ ಮೇಲೆ ಪ್ರಾಪ್ತವಾಗಿರಲೂಬಹುದು. ಯಾರು ಬಲ್ಲರು ಒಳ ವಿಧಾನ. ಗಾಂಧೀಜಿಯಂತಹ ಮಹಾತ್ಮರೂ ಹೆಂಡತಿಯೊಂದಿಗೆ ಮನಸ್ತಾಪವಾಗಿ ಅಪರಾತ್ರಿಯಲ್ಲಿ ಕಸ್ತೂರಬಾ ಅವರನ್ನು ಹೊರದೇಶದಲ್ಲಿ ಮನೆಯಿಂದ